**ಕರ್ನಾಟಕ ಸರ್ಕಾರ**

ಸಂಖ್ಯೆ: ಗ್ರಾಅಪ 32 ಗ್ರಾಪಂಸಿ 2014

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:07-11-2014

**ಇವರಿಂದ:**

ಸರ್ಕಾರದ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ,
ಬಹುಮಹಡಿ ಕಟ್ಟಡ,
ಬೆಂಗಳೂರು.

**ಇವರಿಗೆ:**

ಎಲ್ಲಾ ಜಿಲ್ಲಾ ಪಂಚಾಯತಿಯ
ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು,

ಮಾನ್ಯರೆ,

ವಿಷಯ: ಗ್ರಾಮ ಪಂಚಾಯಿತಿಗಳ ಸಿಬ್ಬಂದಿಗಳ ನೇಮಕಾತಿಗೆ ಅನುಮೋದನೆ ನೀಡಿರುವ ವಿವರವನ್ನು ಸಲ್ಲಿಸುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/22/ಗ್ರಾ.ಪಂ.ಸಿ/2014, ದಿನಾಂಕ: 10.09.2014.
2. ಸರ್ಕಾರದ ತಿದ್ದೋಲೆ ಸಂಖ್ಯೆ: ಗ್ರಾಅಪ 22 ಗ್ರಾಪಂಸಿ 2014 ದಿನಾಂಕ:20-09-2014
3. ಸರ್ಕಾರದ ಪತ್ರ ಸಂಖ್ಯೆ: ಗ್ರಾಅಪ 32 ಗ್ರಾಪಂಸಿ 2014 ದಿನಾಂಕ: 25-10-2014.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಸರ್ಕಾರದ ಆದೇಶಗಳು ಮತ್ತು ಪತ್ರದ ಕಡೆಗೆ ತಮ್ಮ ಗಮನ ಸೆಳೆಯಲಾಗಿದೆ. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಗ್ರಾಮ ಪಂಚಾಯಿತಿಗಳ ಸಿಬ್ಬಂದಿಗಳ ನೇಮಕಾತಿಗೆ ಅನುಮೋದನೆ ನೀಡಿರುವ ವಿವರವನ್ನು ದಿನಾಂಕ:15-11-2014 ರೊಳಗೆ ಸಲ್ಲಿಸುವಂತೆ ತಿಳಿಸಿರುತ್ತಾರೆ.

ಆದುದರಿಂದ ಗ್ರಾಮ ಪಂಚಾಯತಿಗಳ ಸಿಬ್ಬಂದಿಗಳ ನೇಮಕಾತಿ ಅನುಮೋದನೆ ನೀಡಿರುವ ಜಿಲ್ಲಾವಾರು ಮತ್ತು ತಾಲ್ಲೂಕುವಾರು ವಿವರಗಳನ್ನು ಈ ಪತ್ರಕ್ಕೆ ಲಗತ್ತಿಸಿರುವ ನಮೂನೆ-1 ರಂತೆ ಮತ್ತು ಗ್ರಾಮ ಪಂಚಾಯತಿಗಳ ಸಿಬ್ಬಂದಿಗಳ ನೇಮಕಾತಿ ಅನುಮೋದನೆ ನೀಡಿರುವ ಗ್ರಾಮ ಪಂಚಾಯತಿವಾರು ವಿವರವನ್ನು ಈ ಪತ್ರಕ್ಕೆ ಲಗತ್ತಿಸಿರುವ ನಮೂನೆ-2 ರಂತೆ ಹಾರ್ಡ್ (ಹಾರ್ಡ್ ಪ್ರತಿ ಎಂದರೆ ಸಹಿ ಮಾಡಿದ ಪ್ರತಿ) ಮತ್ತು ಸಾಫ್ಟ್ (ಸಾಫ್ಟ್ ಪ್ರತಿ ಎಂದರೆ ಕಂಪ್ಯೂಟರ್‌ನಲ್ಲಿ ಬೆರಳಚ್ಚು ಮಾಡಿರುವುದು) ಪ್ರತಿಗಳನ್ನು ದಿನಾಂಕ:12-11-2014 ರೊಳಗೆ ಸರ್ಕಾರಕ್ಕೆ (sogp2011@gmail.com) ಸಲ್ಲಿಸುವಂತೆ ಕೋರಿದೆ.

ನಿಗದಿತ ದಿನಾಂಕದೊಳಗೆ ಮಾಹಿತಿ ಸಲ್ಲಿಸದಿದ್ದಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಮೂಲಕ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಗಮನಕ್ಕೆ ತರಲಾಗುವುದೆಂದು ಸಹ ತಿಳಿಸಿದೆ.

ತಮ್ಮ ವಿಶ್ವಾಸಿ

(ಗಂಗಾರಾಮ್ ಬಡೇರಿಯ)
ಸರ್ಕಾರದ ಕಾರ್ಯದರ್ಶಿ (ಪಂ.ರಾಜ್),
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

<u>ಪ್ರತಿ:</u>

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ -ಮಾಹಿತಿಗಾಗಿ

ನಮೂನೆ 1

## ಗ್ರಾಮ ಪಂಚಾಯತಿಗಳ ಸಿಬ್ಬಂದಿಗಳ ನೇಮಕಾತಿಗೆ ಅನುಮೋದನೆ ನೀಡಿರುವ ಜಿಲ್ಲಾವಾರು ಮತ್ತು ತಾಲ್ಲೂಕುವಾರು ವಿವರ. (ದಿನಾಂಕ:10-09-2014ರ ನಂತರ)

| ಕ್ರ .ಸಂ | ಜಿಲ್ಲೆ | ತಾಲ್ಲೂಕು | ಗ್ರಾ.ಪಂ. ಸಂಖ್ಯೆ | ಹಾಲಿ ಕಾರ್ಯನಿರ್ವಹಿಸುತ್ತಿರುವ ಬಿಲ್‌ಕಲೆಕ್ಟರ್‌ಗಳ ಸಂಖ್ಯೆ | ಅನುಮೋದನೆ ನೀಡಿದ ಬಿಲ್‌ಕಲೆಕ್ಟರ್‌ಗಳ ಸಂಖ್ಯೆ | ಹಾಲಿ ಕಾರ್ಯನಿರ್ವಹಿಸುತ್ತಿರುವ ಕ್ಲರ್ಕ್‌ಗಳ ಸಂಖ್ಯೆ | ಅನುಮೋದನೆ ನೀಡಿದ ಕ್ಲರ್ಕ್‌ಗಳ ಸಂಖ್ಯೆ | ಹಾಲಿ ಕಾರ್ಯನಿರ್ವಹಿಸುತ್ತಿರುವ ವಾಟರ್‌ಮೆನ್ / ಪಂಪ್ ಮೆಕಾನಿಕ್/ ಪಂಪ್ ಆಪರೇಟರ್ ಗಳ ಸಂಖ್ಯೆ | ಅನುಮೋದನೆ ನೀಡಿದ ವಾಟರ್‌ಮೆನ್ / ಪಂಪ್ ಮೆಕಾನಿಕ್/ ಪಂಪ್ ಆಪರೇಟರ್ ಗಳ ಸಂಖ್ಯೆ | ಹಾಲಿ ಕಾರ್ಯನಿರ್ವಹಿಸುತ್ತಿರುವ ಜವಾನ /ಅಟೆಂಡರ್ ಗಳ ಸಂಖ್ಯೆ | ಅನುಮೋದನೆ ನೀಡಿದ ಜವಾನ / ಅಟೆಂಡರ್ ಗಳ ಸಂಖ್ಯೆ | ಹಾಲಿ ಕಾರ್ಯನಿರ್ವಹಿಸುತ್ತಿರುವ ಸ್ವಚ್ಛತಾಗಾರರ ಸಂಖ್ಯೆ | ಅನುಮೋದನೆ ನೀಡಿದ ಸ್ವಚ್ಛತಾಗಾರರ ಸಂಖ್ಯೆ |
|---|---|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 |

ಜಿಲ್ಲೆಯ ಹೆಸರು

ನಮೂನೆ 2

## ಗ್ರಾಮ ಪಂಚಾಯತಿಗಳ ಸಿಬ್ಬಂದಿಗಳಿಗೆ ನೇಮಕಾತಿಗೆ ಅನುಮೋದನೆ ನೀಡಿದ ಗ್ರಾಮ ಪಂಚಾಯತಿವಾರು ವಿವರ.

| ಕ್ರ.ಸಂ | ತಾಲ್ಲೂಕು | ಗ್ರಾ.ಪಂ. | ಹಾಲಿ ಕಾರ್ಯನಿರ್ವಹಿಸು ತ್ತಿರುವ ಸಿಬ್ಬಂದಿಗಳ ಹೆಸರು | ಗ್ರಾಮ | ಹುದ್ದೆ | ಹುಟ್ಟಿದ ದಿನಾಂಕ /ವಯಸ್ಸು | ವಿದ್ಯಾರ್ಹತೆ | ಕೆಲಸಕ್ಕೆ ನೇಮಕವಾದ ದಿನಾಂಕ | ಗ್ರಾಮ ಪಂಚಾಯಿತಿ ಸಾಮಾನ್ಯ ಸಭೆ ನಿರ್ಣಯದ ಸಂಖ್ಯೆ ಮತ್ತು ದಿನಾಂಕ | ವರ್ಗ/ಜಾತಿ | ಹಾಲಿ ಪಡೆಯುತ್ತಿರುವ ವೇತನ | ಜಿ.ಪಂ ಅನುಮೋದನೆ ಆಗಿದೆ/ ಇಲ್ಲ ಆಗಿದ್ದಲ್ಲಿ ಸಂಖ್ಯೆ ಮತ್ತು ದಿನಾಂಕ | ಶೇಕಡ 40ರ ಮಿತಿಯಲ್ಲಿದೆಯೇ ? | ತಾಲ್ಲೂಕು ಪರಿಶೀಲನಾ ಸಮಿತಿಯ ಶಿಫಾರಸ್ಸು | ಅನುಮೋದನೆಗೆ ಸಂಬಂಧಿಸಿದ ಷರಾ |
|---|---|---|---|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 |